**ಎಂ ವಿ ಸಿ 572/2024 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿ: 28.07.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಂ ಜಿ ಎಸ್ ವಕೀಲರಿಂದಃ**

ನಮ್ಮ ತಂದೆಗೆ ಆದ ಅಪಘಾತವನ್ನು ನಾನು ನೋಡಿಲ್ಲ. ನಮ್ಮ ತಂದೆಗೆ ಆದ ಅಪಘಾತದ ಸಂಪೂರ್ಣ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ನಮ್ಮ ತಂದೆ ತಾಯಿಗೆ 3 ಜನ ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗು. 3 ಜನ ಹೆಣ್ಣು ಮಕ್ಕಳಿಗೂ ಮದುವೆಯಾಗಿದೆ. ನಾವು 3 ಜನ ಹೆಣ್ಣು ಮಕ್ಕಳು ನಮ್ಮ ನಮ್ಮ ಗಂಡಂದಿರ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನಾವು ನಮ್ಮ ನಮ್ಮ ಗಂಡಂದಿರ ಮನೆಗಳಲ್ಲಿ ಅನುಕೂಲವಾಗಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ತಂದೆಯು ಅವರನ್ನು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ.

ನನ್ನ ತಮ್ಮ ಬೇರೆಯವರ ಬಳಿ ಮೆಕಾನಿಕ್ ಆಗಿ ಕೆಲಸ ಮಾಡುತ್ತಿದ್ದಾನೆ. ನನ್ನ ತಮ್ಮನಿಗೆ ಮಾಹೆಯಾನ ರೂ. 15 ಸಾವಿರ ಸಂಬಳ ಬರುತ್ತದೆ. ನಾನು ಗೃಹಿಣಿಯಾಗಿದ್ದೇನೆ. ನನ್ನ ಗಂಡ ವಾಟರ್ ಮೆನ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ತಿಂಗಳಿಗೆ ರೂ.14 ಸಾವಿರ ಸಂಬಳ ಬರುತ್ತದೆ. ನನ್ನ ಗಂಡ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರಾದರೂ ಅವರ ಹುದ್ದೆ ಇನ್ನು ಖಾಯಂ ಆಗಿಲ್ಲ.

ನನ್ನ ಒಬ್ಬ ತಂಗಿಯ ಗಂಡ ಮರಗೆಲಸ ಮಾಡುತ್ತಾರೆ. ಮತ್ತೊಬ್ಬ ತಂಗಿಯ ಗಂಡ ಆದಿಚುಂಚನಗಿರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ನನ್ನ ತಂದೆಗೆ 4 ಎಕರೆ ಜಮೀನು ಇದೆ. ನಮ್ಮ ತಂದೆ ಮೃತರಾದ ನಂತರ ಆ ಜಮೀನಿನಲ್ಲಿ ಯಾರೂ ಸಹ ಏನನ್ನು ಮಾಡುತ್ತಿಲ್ಲ. ಆ ಜಮೀನಿನಲ್ಲಿ 25 ತೆಂಗಿನ ಮರ ಇದೆ. ಆ ತೆಂಗಿನ ಮರಗಳಿಂದ ಯಾವುದೇ ಆದಾಯ ಇಲ್ಲ. ಆ ಜಮೀನಿನಿಂದ ಈಗಲೂ ಸಹ ಮೊದಲಿನ ಹಾಗೆ ಆದಾಯ ಬರುತ್ತಿದೆ ಎಂದರೆ ಸರಿಯಲ್ಲ.

ನನ್ನ ಗಂಡನ ಮನೆಯ ಪಡಿತರ ಚೀಟಿಯಲ್ಲಿ ನನ್ನ ಹೆಸರು ಇದೆ ಎಂದರೆ ಸರಿ. ನಮ್ಮ ತಂದೆಯ ಮನೆಯ ಪಡಿತರ ಚೀಟಿಯಲ್ಲಿ ನನ್ನ ಹಾಗೂ ನನ್ನ ಸಹೋದರಿಯರ ಹೆಸರುಗಳು ಇಲ್ಲ ಎಂದರೆ ಸರಿ. ನಮ್ಮ ತಂದೆಯವರ ಮನೆಯಲ್ಲಿ ಬಿ ಪಿ ಎಲ್ ಪಡಿತರ ಚೀಟಿ ಇದೆ ಎಂದರೆ ಸರಿ. ಸದರಿ ಬಿ ಪಿ ಎಲ್ ಪಡಿತರ ಚೀಟಿ ಯಲ್ಲಿ ನನ್ನ ತಮ್ಮನ ಹೆಸರು ಇಲ್ಲ ಎಂದರೆ ಸರಿಯಲ್ಲ.

ಅಪಘಾತ ಜರುಗಿದ ಸ್ಥಳಕ್ಕೆ ನಾವು ಹೋಗಿದ್ದೆವು. ನಾವು ಹೋಗುವ ವೇಳೆಗೆ ಅವರು ಮೃತರಾಗಿದ್ದರು. ಅಪಘಾತ ಸಮಯದಲ್ಲಿ ನಮ್ಮ ತಂದೆಯು ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನವು ಈಗಲೂ ಸಹ ಅವರ ಹೆಸರಿನಲ್ಲಿಯೇ ಇದೆ. ನಮ್ಮ ತಂದೆಯ ಬಳಿ ವಾಹನ ಚಾಲನಾ ಪರವಾನಗಿ ಇರದೆ ಇದ್ದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾಹನ ಚಾಲನಾ ಪರವಾನಗಿಯನ್ನು ನಮ್ಮ ತಂದೆಯು ಯಾವಾಗಲೂ ಅವರ ಜೇಬಿನಲಿಸ್ಲಿ ಇಟ್ಟುಕೊಂಡು ಓಡಾಡುತ್ತಿದ್ದ ಕಾರಣ ಅದು ಕಳೆದು ಹೋಗಿರುವುದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ನನ್ನ ಒಡಹುಟ್ಟಿದವರೆಲ್ಲರೂ ವಿದ್ಯಾವಂತರೇ. ವಾಹನ ಚಾಲನಾ ಪರವಾನಗಿ ಕಳೆದು ಹೋಗಿರುವ ಕಾರಣ ಆರ್ ಟಿ ಓ ಕಚೇರಿಗೆ ಅರ್ಜಿ ಸಲ್ಲಿಸಿ ಅದರ ದೃಢೀಕೃತ ನಕಲುಗಳನ್ನು ಪಡೆದುಕೊಳ್ಳಬಹುದು ಎಂದರೆ ಸರಿ. ಯಾವ ಆರ್ ಟಿ ಓ ಕಚೇರಿಯಲ್ಲಿ ನಮ್ಮ ತಂದೆ ವಾಹನ ಚಾಲನಾ ಪರವಾನಗಿಯನ್ನು ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಅಪಘಾತ ಆದ ಸಮಯದಲ್ಲಿ ನಮ್ಮ ತಂದೆ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನಕ್ಕೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ. ಇದ್ದಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ.

ಕಾರಿನ ಚಾಲಕನ ತಪ್ಪು ಇರದೆ ಇದ್ದರೂ ಸಹ ನಮ್ಮ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರಿಕೊಂಡು ಹೋಗಿ ಅಪಘಾತ ಮಾಡಿಕೊಂಡು

ಬಿದ್ದು ಗಾಯ ಮಾಡಿಕೊಂಡು ಸದರಿ ಗಾಯಗಳ ಕಾರಣದಿಂದ ಮೃತರಾಗಿದ್ದಾರೆ ಎಂದರೆ ಸರಿಯಲ್ಲ.

ಕಾರಿನ ಮಾಲೀಕರು ನಮ್ಮ ಪರಿಚಯಸ್ಥರು ಎಂದರೆ ಸರಿಯಲ್ಲ. ಅವರು ನಮ್ಮ ಪರಿಚಯಸ್ಥರಾಗಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ 65 ವರ್ಷ ಎಂದರೆ ಸರಿಯಲ್ಲ. ಶಾಲಾ ದಾಖಲಾತಿಗಳ ಪ್ರಕಾರ 58 ವರ್ಷ. ನಮ್ಮ ತಂದೆ ಏನು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಆಧಾರ್ ಕಾರ್ಡನ್ನು ಹಾಜರುಪಡಿಸಿಲ್ಲ, ಏಕೆಂದರೆ ಅದು ಸಹ ಕಳೆದು ಹೋಗಿದೆ. ನಮ್ಮ ತಂದೆಯ ವಯಸ್ಸು 65 ಆಗಿರುವ ಕಾರಣ ಸರ್ಕಾರಿ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯು ಸರ್ಕಾರಕ್ಕೆ ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ. ಯಾವುದೇ ವ್ಯಕ್ತಿ ಮಾಹೆಯಾನ ರೂ. 50 ಸಾವಿರಕ್ಕಿಂತ ಹೆಚ್ಚು ಆದಾಯ ಹೊಂದಿದ್ದರೆ ಅವರು ತೆರಿಗೆ ಪಾವತಿಸಬೇಕು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ 65 ಕ್ಕಿಂತ ಹೆಚ್ಚು ವಯಸ್ಸಾಗಿದ್ದ ಕಾರಣ ಅವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಆದಾಯದ ಮೂಲಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನ್ನ ತಮ್ಮನನ್ನು ಕೇಳಿ ಹೇಳಬೇಕು.

ನನ್ನ ತಾಯಿ ಏನು ಕೆಲಸ ಮಾಡದೆ ಮನೆಯಲ್ಲಿ ಇದ್ದಾರೆ. ನಾನಾಗಲೀ, ನನ್ನ ತಾಯಿಯಾಗಲ, ನನ್ನ ಸಹೋದರಿಯರಾಗಲೀ ಅಥವಾ ನನ್ನ ತಮ್ಮನಾಗಲೀ ನಮ್ಮ ತಂದೆಯ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ದೂರನ್ನು ನಮ್ಮ ಚಿಕ್ಕಪ್ಪ ನೀಡಿದ್ದಾರೆ. ನಮ್ಮ ತಂದೆಯ ತಪ್ಪಿನಿಂದಲೇ ಬಿದ್ದು ಗಾಯ ಮಾಡಿಕೊಂಡಿದ್ದರೂ ಸಹ ಹೇಗಾದರೂ ಮಾಡಿ ಪರಿಹಾರ ಪಡೆಯಬೇಕೆಂಬ ಕಾರಣದಿಂದ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯೇ ಬಿದ್ದು ಗಾಯ ಮಾಡಿಕೊಂಡು ಆ ಗಾಯಗಳ ಕಾರಣದಿಂದ ಮೃತರಾಗಿರುವ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಸಾ ಓ ಹೇ ಸ ಒ

(ಬಾಬು ಎನ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಪಾಂಡವಪುರ